ಗಳಿಸಿ ಉಜ್ವಲ ಭವಿಷ್ಯದ ಕಡೆಗೆ ನಡೆಯಬೇಕು' ಎಂದು ಹೆಬ್ಬಾಗಿಲಿನಲ್ಲೇ ದೊಡ್ಡ ಫಲಕವನ್ನು ಕಾಲೇಜಿನವರೇ ಹಾಕಿದರು. ಅದೇ ಬೋರ್ಡಿನ ಎದುರು ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರಾಥಮಿಕ ಪಾಠವಾದ ನಿಮಗೆ ಪ್ರಶ್ನೆಗಳಿದ್ದರೆ ಎದ್ದು ನಿಂತು ಕೇಳಬೇಕು ಎನ್ನುವ ಮಾತುಗಳು ಅಂತಃಸತ್ವ ಇಲ್ಲದೆ ಖಾಲಿ ಮಾತುಗಳಂತೆ ಸವಕಲಾಗುತ್ತಾ, ತಮ್ಮನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ರೂಪಿಸುತ್ತಿರುವ ಪ್ರಜಾಪ್ರಭುತ್ವವನ್ನು ನೋಡಬೇಕಾದ ವಿಧಾನಗಳನ್ನು ಮರೆಯತೊಡಗಿದರು. ದೇಶದಲ್ಲಿ ಬಟ್ಟೆ, ಆಹಾರ, ಆಚರಣೆಗಳಲ್ಲಿರುವ ವೈವಿಧ್ಯತೆಗಳನ್ನು ಚರ್ಚಿಸಿ ಅದರ ಹಿಂದೆ ಸುಪ್ತವಾಗಿ ಅಡಗಿಕೊಂಡಿರುವ ಇತಿಹಾಸ, ರಾಜಕೀಯ, ಮೇಲುಕೀಳುಗಳ ಒದ್ದಾಟ, ಐತಿಹ್ಯಗಳ ವಿಷಯಗಳನ್ನು ಬದಿಗಿಟ್ಟು ಇಲ್ಲದ ವಿಚಾರಗಳಲ್ಲೇ ಮುಳುಗೇಳುತ್ತಿದ್ದರು. ಹುಟ್ಟು ಹಾಕುವವರಿಲ್ಲದೆ ಇದ್ದಲ್ಲೇ ತಿರುಗುವ ದೋಣಿಯಂತೆ ಇಡೀ ಕಾಲೇಜು ನಿಂತಲ್ಲೇ ನಿಲ್ಲುವ ಅಭ್ಯಾಸದಲ್ಲಿ ನಿರತವಾಗಿತ್ತು.

ಒಂದು ಮಸಾಲೆ ದೋಸೆಯ ಬೆಲೆಯನ್ನು ಏರಿಸುವ ಹೊಟೇಲ್ ಮಾಲೀಕರ ನಿರ್ಧಾರಕ್ಕೂ ಸರ್ಕಾರ ಪೆಟ್ರೋಲ್ ಬೆಲೆಯನ್ನು ಒಂದು ರೂಪಾಯಿ ಹೆಚ್ಚಿಸಿದರೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದಿರಬಹುದಾದ ರಾಜಕೀಯ ಮೇಲಾಟಕ್ಕೂ ಇರುವ ವ್ಯತ್ಯಾಸಗಳು ಯಾರ ಅರಿವಿಗೂ ಬರುತ್ತಲೇ ಇರಲಿಲ್ಲ. ನಿಧಾನವಾಗಿ ಮನೋಹರನ ಸುದ್ದಿಯನ್ನು ಎಲ್ಲರೂ ಮರೆಯತೊಡಗಿದರು ಎನ್ನುವಾಗಲೇ ಅವನು ವಿರೋಧಿಸುತ್ತಿದ್ದ ಪತ್ರಿಕೆಯ ಮೊದಲಪುಟದಲ್ಲಿ ಕೆಂಪು ಅಕ್ಷರಗಳ ಸಾಲಿನಲ್ಲಿ ಅವನ ಸಾವಿನ ಸುದ್ದಿಯನ್ನು ಬರೆಯಲಾಗಿತ್ತು.

ನಾಲ್ಕೈದು ಗುಂಡೇಟು ತಗುಲಿದ್ದ ದೇಹದ ತುಂಬಾ ಕೆಂಪು ರಕ್ತ ಹೆಪ್ಪುಗಟ್ಟಿತ್ತು. ಗುರುತು ಹಿಡಿಯಲಾರದಷ್ಟು ಗಾಯಗೊಂಡಿದ್ದ ಮುಖವನ್ನು ಅದು ಯಾವಯಾವುದೋ ಗುರುತುಗಳಿಂದ ಪೊಲೀಸರು ಪತ್ತೆ ಹಚ್ಚಿದ್ದರು. ಮೊದಲು ಆಂಧ್ರ ಪ್ರದೇಶದ ಕೆಲವು ಕಡೆ ನಂತರ ಕರ್ನಾಟಕದ ಚಿಕ್ಕಮಗಳೂರು ಭಾಗದಲ್ಲಿದ್ದ ನಕ್ಸಲರ ಜೊತೆಗಿದ್ದ ವಿದ್ಯಾರ್ಥಿ ನಾಯಕ ಮನೋಹರ ಕಳೆದ ರಾತ್ರಿ ಪೊಲೀಸರ ಗುಂಡಿಗೆ ಬಲಿಯಾಗಿದ್ದಾನೆ ಎಂದು ದೊಡ್ಡ ಅಕ್ಷರಗಳಲ್ಲಿ ಬರೆಯಲಾಗಿತ್ತು. ಕಾಲೇಜಿನಲ್ಲಿ ಇತಿಹಾಸದ ವಿದ್ಯಾರ್ಥಿಯಾಗಿದ್ದ ಮನೋಹರ ಯಾವತ್ತಿಗೂ ಭವಿಷ್ಯದ ಹಂಬಲದಲ್ಲೇ ಇದ್ದವನು. ಸದಾ ಮತ್ತೊಬ್ಬರ ವಿಚಾರಕ್ಕೆ ಬೀದಿಯಲ್ಲಿರುತ್ತಿದ್ದ ಮನೋಹರ ಕಡೆಗೆ ಬೀದಿಯಲ್ಲೇ ಮಲಗಿದ್ದನು. ಅವನು ಇಲ್ಲವಾದ ಸುದ್ದಿಯನ್ನು ತಿಳಿದ ಅಂಜಲಿಗೆ ಅವನಿಂದ ಇನ್ನು ಕೆಲವು ತಿಂಗಳುಗಳಲ್ಲಿ ಹುಟ್ಟು ಪಡೆಯಬಹುದಾದ ಜೀವದ ಕುರಿತು ಯಾರೊಂದಿಗೂ ಹೇಳಿಕೊಳ್ಳುವ ಸ್ಥಿತಿಯಿಂದ ದೂರ ನಿಂತಿದ್ದಳು ಮತ್ತು ಇತಿಹಾಸದ ವಿದ್ಯಾರ್ಥಿಯಾಗಿದ್ದರೂ ಭವಿಷ್ಯವನ್ನು ಚಿಂತಿಸುತ್ತಿದ್ದ ಮನೋಹರ ಹೀಗೆ ಕೊನೆಯಾಗಿದ್ದು ಭವಿಷ್ಯದಲ್ಲಿ ಐತಿಹಾಸಿಕ ವ್ಯಂಗ್ಯವಾಗಿ ನಿಲ್ಲುವುದು ಸ್ಪಷ್ಟವಾಗುತ್ತಿತ್ತು.

ನಿಜಕ್ಕೂ ಮನೋಹರ ಸತ್ತಿದ್ದು ಹೇಗೆಂದು ಯಾರಿಗೂ ತಿಳಿದಿರಲಿಲ್ಲ. ಪೊಲೀಸರು ತನಿಖೆಯನ್ನು ಎಷ್ಟು ಸಾಧ್ಯವೋ ಅಷ್ಟೇ ಬೇಗ ಮುಗಿಸಿದ್ದರು. ಮನೋಹರನ ಹೋರಾಟ ಜನರ ನಡುವಿನಿಂದಲೇ ಹುಟ್ಟಿ ಜನರಿಂದಲೇ ರೂಪುಗೊಂಡು ಜನರಿಂದಲೇ ಸಮಾಪ್ತಿಯನ್ನು ಪಡೆಯುತ್ತಿತ್ತು. ಆದರೆ ಈಗ ಅವನ ನಡುವಿದ್ದ ಜನರಿದ್ದಾರೆ. ಆದರೆ ಅದೇ ಜನರ ನಡುವೆ ಯಾವಾಗಲೂ ಕೆಂಪು ಕಣ್ಣುಗಳಲ್ಲಿ ನಾಳೆಯ ಬೆಳಕು ಚೆಲ್ಲುತ್ತಿದ್ದ ಮನೋಹರನಿಲ್ಲ. ಮೊದಮೊದಲು ಮನೋಹರನ ಸಾವು, ಒಡಲಿನಲ್ಲಿರುವ ಹೊಸ ಜೀವ, ಮದುವೆ ಹೀಗೆ ಯಾವುಯಾವುದೋ ಗೊಂದಲದಲ್ಲಿದ್ದ ಅಂಜಲಿ ಅದೊಂದು ದಿನ ವಿಚಿತ್ರವಾದ ಆವೇಶ ಬಂದವಳಂತೆ ಈ ಮಗು ನನಗೆ ಬೇಕೇಬೇಕು ಮುಂದಾಗುವುದನ್ನು ನೋಡಿದರೆ ಆಯ್ತು ಎನ್ನುವಂತೆ ಮೈಸೂರು ತೊರೆದು ಸೀದಾ ಬೆಂಗಳೂರಿಗೆ ಬಂದಳು. ಹೊಟೇಲ್ ರೆಸೆಪ್ಷನಿಸ್ಟ್, ಕಾಲ್ ಸೆಂಟರ್, ಸೇಲ್ಸ್ ಗರ್ಲ್ಸ್ ಹೀಗೆ ಏನೇನೋ ಕೆಲಸಗಳನ್ನು ಮಾಡುತ್ತಾ ಇದೀಗ ಬೆಂಗಳೂರಿನ "ಆಡ್ ಬಾಕ್ಸ್" ಎನ್ನುವ ಜಾಹೀರಾತು ಕಂಪನಿಯ ತೆಕ್ಕೆಗೆ ಬಿದ್ದಿದ್ದಳು. ಅವಳ ಮಗ ಸುಹಾಸ ಈ ಯಾವುದರ ಅರಿವೂ ಇರದೆ ಅದಾಗಲೇ ಏಳು ವರ್ಷಗಳನ್ನು ಪೂರೈಸಿದ್ದ. ಈ ಎಲ್ಲವನ್ನೂ ತಿಳಿದಿದ್ದ ಅಭಿಜಿತ ಮಾತ್ರ, ಅಂಜಲಿಯಲ್ಲಿ ತನಗಷ್ಟೇ ಇಷ್ಟವಾಗುವ ಒಂದಿಷ್ಟು ಗುಣಗಳನ್ನು ಗುರುತು ಮಾಡಿಕೊಂಡು ಮುಂದೊಂದು ದಿನ ತನ್ನನ್ನು ಒಪ್ಪಿಯಾಳು ಎನ್ನುವಂತೆ